ಅಮ್ಮನೂ ತುಂಬ ಬದಲಾಗಿಬಿಟ್ಟಿದ್ದಾಳೆ. ಅವಳಿಗೀಗ ಮಗ–ಸೊಸೆಯೇ ಸರ್ವಸ್ವವಾಗಿದ್ದಾರೆ. ಇದನ್ನು ವಿಭಾಳ ಎದುರು ಹೇಳಿದರೆ– 'ಅಕ್ಕ, ಮಗ–ಸೊಸೆಯರೊಂದಿಗೆ ಮನಸು ಕೆಡಿಸಿಕೊಂಡರೆ ಅಮ್ಮ ಈ ವಯಸ್ಸಿನಲ್ಲಿ ಎಲ್ಲಿಗೆ ಹೋಗಬೇಕು ಹೇಳು. ನಾನು ಅಥವಾ ನೀನು ಅವಳನ್ನು ಕೊನೆಯವರೆಗೆ ನೋಡಿಕೊಳ್ಳಲು ಸಾಧ್ಯವೇ?' ಎನ್ನುತ್ತಾಳೆ.

ಅಂಗಳದಲ್ಲಿ ನಲ್ಲಿ ಫರ್ ಫರ್ ಶಬ್ದ ಮಾಡತೊಡಗಿತು. ಅಮ್ಮ ಸೂಚ್ಯವಾಗಿ ನನ್ನ ಕಡೆಗೆ ನೋಡಿದಳು. ನಾನು ಬೇಕಂತಲೇ ಬೆಳಗ್ಗೆ ಓದಿಯಾದ ಪೇಪರನ್ನೇ ಮತ್ತೆ ಓದುವವಳಂತೆ ನಾಟಕ ಮಾಡತೊಡಗಿದೆ. ಮನಸ್ಸಿನಲ್ಲೇ, 'ನಾನೇನು ಇವರ ಮನೆ ಕೆಲಸ ಮಾಡಲು ಬಂದಿರುವೆನೇ. ಮಗ–ಸೊಸೆಯನ್ನು ಪಿಕ್ಚರ್ ನೋಡಲು ಕಳಿಸಿದೆಯಲ್ಲ, ಈಗ ಅನುಭವಿಸು' ಎಂದುಕೊಂಡು ಹಾಗೇ ಕುಳಿತುಕೊಂಡೆ. ನಾನು ಪೇಪರ್ ಓದುವುದರಲ್ಲಿ ಮಗ್ನಳಾಗಿರುವುದನ್ನು ನೋಡಿ ಅಮ್ಮ ಮೊಣಕಾಲ ಮೇಲೆ ಕೈ ಊರಿ ಮೆಲ್ಲಗೆ ಎದ್ದು ತಾನೇ ನೀರು ತುಂಬತೊಡಗಿದಳು.

'ಸಾವಿತ್ರಿ ಇದೀಯಾ?' ಎಂದು ಕೇಳುತ್ತ ಪಕ್ಕದ ಮನೆ ಕಾವೇರಮ್ಮ ಬಂದವರು ನನ್ನನ್ನು ನೋಡಿ, 'ಪ್ರಭಾ ನೀನಿನ್ನೂ ಹೋಗಿಲ್ಲವೇ? ನೀನು ವಾಪಸ್ ಹೋಗಿರುವಿ ಎಂದುಕೊಂಡಿದ್ದೆ' ಎಂದರು.

ನಾನು ಮನಸ್ಸಿನಲ್ಲೇ, 'ನಾನಿಲ್ಲಿದ್ದರೆ ಇವರಿಗೇನು ನಷ್ಟ, ಇವರೇನು ನನಗೆ ಊಟ ಹಾಕುವರೇ?' ಎಂದುಕೊಂಡೆ.

'ಇವತ್ತು ವೇಣುಗೋಪಾಲ ಸ್ವಾಮಿಯ ದೇವಸ್ಥಾನದಲ್ಲಿ ಸ್ವಾಮಿಗಳ ಪ್ರವಚನವಿದೆ, ನಿನ್ನಮ್ಮನೂ ಬರುತ್ತಾಳಾ ಎಂದು ಕೇಳಲು ಬಂದಿದ್ದೆ. ನೀನಿನ್ನೂ ಇರುವೆ ಎಂದ ಮೇಲೆ ಅವಳು ಬರುವದಿಲ್ಲ ಬಿಡು. ನಾನು ಹೊರಡುತ್ತೇನೆ.'

'ಅಮ್ಮ ಅದ್ಯಾಕೆ ಬರುವುದಿಲ್ಲ ಚಿಕ್ಕಮ್ಮ, ನಾನೇನು ಅವಳನ್ನು ಹೋಗಬೇಡವೆಂದು ತಡೆಯುತ್ತೇನಾ?'

'ನೀನೇನೂ ತಡೆಯುವುದಿಲ್ಲ ಮಗಳೇ, ನಾಲ್ಕು ದಿನ ಇರಲು ಮಗಳು ತವರಿಗೆ ಬಂದಾಗ ನಿನ್ನನ್ನು ಬಿಟ್ಟು ಬರಲು ಸಾವಿತ್ರಿಯ ಮನಸ್ಸು ಒಪ್ಪುವುದೇ?'

'ನಾಲ್ಕೇ ದಿನ ಅಲ್ಲ ಚಿಕ್ಕಮ್ಮ, ನಾನು ಪೂರಾ ಒಂದು ತಿಂಗಳು ಇಲ್ಲಿಯೇ ಇರುವವಳಿದ್ದೇನೆ' ನಾನು ಬೇಕೆಂದೆ ಒತ್ತಿ ಹೇಳಿದೆ.

'ಅವಶ್ಯವಾಗಿ ಇರು ಪ್ರಭಾ. ಇದು ನಿನ್ನ ತಮ್ಮನ ಮನೆ, ನಾದಿನಿಯೊಡನೆ ಎಷ್ಟು ದಿನ ಬೇಕಾದರೂ ಸಂತೋಷವಾಗಿರು. ಮಕ್ಕಳೂ ಬಂದಿರುವರಲ್ಲವೇ?'

'ಮಕ್ಕಳು ಹೇಗೆ ಬರುತ್ತಾರೆ? ಅವರಿಗೆ ಸ್ಕೂಲ್ ಇಲ್ಲವಾ?'

'ಹಾಗಾದರೆ ಅವರನ್ನು ಅಲ್ಲಿ ಯಾರು ನೋಡಿಕೊಳ್ಳುತ್ತಾರೆ?

'ಯಾರೇಕೆ ನೋಡಿಕೊಳ್ಳಬೇಕು? ಅವರೀಗ ದೊಡ್ಡವರಾಗಿದ್ದಾರೆ.' ಅಷ್ಟರಲ್ಲಿ ಅಮ್ಮ ಬಂದು, 'ಮನೆಯಲ್ಲಿ ಇವಳ ಅತ್ತೆ ಇರುವರಲ್ಲ ಕಾವೇರಿ, ಓರಗಿತ್ತಿ ಸೀಮಾ ಇದ್ದಾಳೆ, ಅವರೇ ನೋಡಿಕೊಳ್ಳುತ್ತಾರೆ. ಇವಳಿಗೆ ಸ್ವಲ್ಪ ಮೈಗೆ ಹುಷಾರು ಇರಲಿಲ್ಲ ಅದಕ್ಕಾಗಿಯೇ ಕರೆಸಿಕೊಂಡೆ. ಅವರು ಮಕ್ಕಳನ್ನು ನೋಡಿಕೊಳ್ಳುವರೆಂದೇ ಇವಳಿಗೆ ಬರಲು ಸಾಧ್ಯವಾಯಿತು.'

'ಎಲ್ಲರೂ ಒಟ್ಟಿಗೇ ಇರುವುದೇ ಒಳ್ಳೆಯದಮ್ಮ. ಈಗಿನ ಕಾಲದಲ್ಲಿ ಹಾಗಿರುವುದೇ ಅಪರೂಪ. ಮನೆಯಲ್ಲಿ ಎಷ್ಟು ಜನ ಕೆಲಸದವರಿದ್ದರೂ ನಮ್ಮವರು ನೋಡಿಕೊಳ್ಳುವಂತೆ ನೋಡಿಕೊಳ್ಳಲು ಸಾಧ್ಯವೇ? ನಾನು ಮದುವೆಯಾಗಿ ಬಂದಾಗ ನಮ್ಮ ಮನೆಯಲ್ಲಿ ಮೂವತ್ತು ಜನರ ಕೂಡು